ಸಾಕ್ಷಿಯನ್ನು ದಿನಾಂಕ **17-03-2023** ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀಸವಾಲು- ಅರ್ಜಿದಾರರ ಪರ ಶ್ರೀ ಕೆ.ಎಸ್.ಆರ್. ವಕೀಲರಿಂದಃ

2. ಕಳೆದ ಏಳು ವರ್ಷಗಳಿಂದ ನಾನು Stellar Insurance Management Services private limited ನಲ್ಲಿ ಕರ್ತವ್ಯ ಮಾಡುತ್ತಾ ಇದ್ದೇನೆ.

3. 2 ನೇ ಎದುರುದಾರ ಸಂಸ್ಥೆಯಲ್ಲಿ ನಾನು ಕೆಲಸ ಮಾಡುತ್ತಾ ಇರುವುದಿಲ್ಲ. Stellar Insurance Management Services private limited ಸಂಸ್ಥೆಯವರು ಹೇಳಿದ ಹಾಗೇ ನಾವು ಕೆಲಸ ಮಾಡುತ್ತೇವೆ ಎಂದರೆ ಸರಿ.

4. ತನಿಖೆಯನ್ನು ಯಾವ ರೀತಿ ಮಾಡಬೇಕು ಎಂದು Stellar company ಯವರು ನಮಗೆ ಬರವಣಿಗೆಯಲ್ಲಿ ಸೂಚನೆಯನ್ನು ನೀಡುತ್ತಾರೆ ಎಂದರೆ ಬಾಯಿಮಾತಿನಲ್ಲಿ ನೀಡುತ್ತಾರೆ.

5. ಈ ಅಪಘಾತಕ್ಕೆ ಸಂಬಂಧಪಟ್ಟ ಹಾಗೇ ದಾಖಲೆಗಳನ್ನು ನಾನು ಖುದ್ದಾಗಿ ಪಡೆದುಕೊಂಡಿರುವುದಿಲ್ಲ ಆದರೆ ನಮ್ಮ 5 Stellar ಸಂಸ್ಥೆಯವರು ಪಡೆದುಕೊಂಡಿದ್ದಾರೆ. ಈ ಪ್ರಕರಣದ ಅರ್ಜಿದಾರರನ್ನು ನಾನು ವಿಚಾರಣೆ ಮಾಡಿದ್ದೇನೆ.

6. ಈ ಪ್ರಕರಣದ ಅರ್ಜಿದಾರರು ಕೇವಲ ಬಾಯಿ ಮಾತಿನಲ್ಲಿ ನಮಗೆ ಮಾಹಿತಿಯನ್ನು ನೀಡಿದ್ದಾರೆ, ಬರವಣಿಗೆಯಲ್ಲಿ ಹೇಳಿಕೆಯನ್ನು ನೀಡಿಲ್ಲ.

7. ಈ ಪ್ರಕರಣದಲ್ಲಿ ಇರುವ 5 ಅಪಘಾತದಲ್ಲಿ ಗಾಯ ಗೊಂಡಿರುವ ಎಲ್ಲಾ ಗಾಯಾಳುಗಳನ್ನು ನಾವು ವಿಚಾರಣೆ ಮಾಡಿದ್ದೆವೋ ಹೇಗೆ ಎಂದರೆ ಇಬ್ಬರು ಗಾಯಾಳುಗಳನ್ನು ವಿಚಾರಣೆ ಮಾಡಿದ್ದೇವೆ. ಈಗ ಹೇಳುತ್ತೇನೆ ಸಾಗರ್ ಎಂಬ ಗಾಯಾಳುವಿನ ಹೇಳಿಕೆಯನ್ನು ಪಡೆದುಕೊಳ್ಳಲಾಗಿದೆ. ಸಾಗರ್ ರವರು ಬರವಣಿಗೆಯಲ್ಲಿ ನಮಗೆ ಹೇಳಿಕೆಯನ್ನು ನೀಡಿಲ್ಲ, ಆದರೆ ಆಡಿಯೋ ಮತ್ತು ವಿಡಿಯೋ ರೆಕಾರ್ಡಿಂಗ್ ಮಾಡಿಕೊಳ್ಳಿರಿ ಎಂದು ಹೇಳಿದರು ಮತ್ತು ಅದೇ ಪ್ರಕಾರವಾಗಿ ನಾವು ಸಾಗರ್ ರವರ ಹೇಳಿಕೆಯನ್ನು ಆಡಿಯೋ ಮತ್ತು ವಿಡಿಯೋ ಚಿತ್ರೀಕರಣ ಮಾಡಿಕೊಂಡಿದ್ದೇವೆ.

8. ಸದರಿ ಅಪಘಾತದಲ್ಲಿ ಸಾಗರ್ ರವರ ತಲೆಗೆ ಗಾಯ ಆಗಿತ್ತು. ಸದರಿ ಸಾಗರ್ ರವರಿಗೆ ತುಂಬಾ ಏಟು ಬಿದ್ದಿತ್ತು ಎಂದರೆ ಸರಿ. ಸಾಗರ್ ರವರ ತಲೆಗೆ ಶಸ್ತ್ರ ಚಿಕಿತ್ಸೆ ಮಾಡಲಾಗಿತ್ತು ಎಂದರೆ ಸುಳ್ಳು. ಸಾಗರ್ ರವರು ಮಾತನಾಡುವ ಸ್ಥಿತಿಯಲ್ಲಿ ಇರಲಿಲ್ಲ ಎಂದರೆ ಸುಳ್ಳು.

9. ಅಪಘಾತದಲ್ಲಿ ಉಂಟಾಗಿದ್ದ ಗಾಯಗಳ ಕಾರಣದಿಂದ ಸಾಗರ್ ರವರು ಅರೆ ಪ್ರಜ್ಞಾವಸ್ಥೆಯಲ್ಲಿ ಇದ್ದರು ಎಂದರೆ ಸುಳ್ಳು.

10. KA-45-A-1611 ವಾಹನದ ಚಾಲಕ ಮತ್ತು ಮಾಲೀಕನ ಹೇಳಿಕೆಗಳನ್ನು ನಾವು ಪಡೆದುಕೊಂಡಿರುವುದಿಲ್ಲ ಎಂದರೆ ನಾವು ಹೋದಾಗ ಅವರು ಸಿಕ್ಕಲಿಲ್ಲ. ಸದರಿ ವಾಹನದ ಚಾಲಕ ಮತ್ತು ಮಾಲೀಕನ ಹೇಳಿಕೆಗಳನ್ನು ಪಡೆದುಕೊಳ್ಳಲು ಮತ್ತೊಮ್ಮೆ ಪ್ರಯತ್ನ ಮಾಡಲು ನಮಗೆ ತೊಂದರೆ ಇರಲಿಲ್ಲ ಎಂದರೆ ಸರಿ. ಅದೇ ರೀತಿ ಆ ಅಪಘಾತದಲ್ಲಿ ಗಾಯಗೊಂಡ ಇತರೆ ಗಾಯಾಳುಗಳನ್ನು ವಿಚಾರಣೆ ಮಾಡಲು ನಮಗೆ ಯಾವುದೇ ತೊಂದರೆಯು ಇರಲಿಲ್ಲ.

11. ಅಪಘಾತದ ಸಮಯದಲ್ಲಿ KA-45-A-1611 ವಾಹನವನ್ನು ಮಲ್ಲೇಶರವರ ಮಗ ಮಂಜುನಾಥನು ಚಾಲನೆ ಮಾಡುತ್ತಾ ಇದ್ದನು ಎಂದರೆ ಸುಳ್ಳು. ಮಂಜುನಾಥ ಎನ್ನುವ ವ್ಯಕ್ತಿಯು ಅಪಘಾತದ ಸಮಯದಲ್ಲಿ KA-45-A-1611 ವಾಹನವನ್ನು ಚಾಲನೆ ಮಾಡುತ್ತಾ ಇದ್ದನು ಎಂಬುದಾಗಿ ಪೊಲೀಸರಿಗೆ ದೂರನ್ನು ಕೊಡಲಾಗಿದೆ ಎಂಬುದಾಗಿ ಈ ಪ್ರಕರಣದ ಅರ್ಜಿದಾರರು ನನ್ನ ಬಳಿ ಹೇಳಿದ್ದಾರೆ ಎಂದರೆ ಸುಳ್ಳು.

12. ಅರ್ಜಿದಾರರಾದ ಸೀತಾ ರವರ ಹೇಳಿಕೆಯನ್ನು ನಾವು ಆಡಿಯೋ ಮತ್ತು ವಿಡಿಯೋ ಚಿತ್ರೀಕರಣ ಮಾಡಿಕೊಂಡಿರುವುದಿಲ್ಲ.

13. ನಿಆರ್-9 ಎಂದು ಗುರುತು ಆಗಿರುವ ದಾಖಲೆಗಳನ್ನು ನಮ್ಮ Stellar Insurance Company ರವರು ನಮಗೆ ನೀಡಿದ್ದಾರೆ ಎಂದರೆ ಸರಿ.

14. ನಿಆರ್-9 ರಲ್ಲಿ ಸಾಕ್ಷಿದಾರರ ಹೇಳಿಕೆಗಳನ್ನು ಆಡಿಯೋ ಮತ್ತು ವಿಡಿಯೋ ಚಿತ್ರೀಕರಣ ಮಾಡಿಕೊಳ್ಳಬೇಕು ಎಂದು ನಮೂದು ಇಲ್ಲ ಎಂದರೆ ಸರಿ.

15. ತನಿಖಾ ಸಮಯದಲ್ಲಿ ನಾವು ಯಾವ ಯಾವ ವ್ಯಕ್ತಿಗಳ ಹೇಳಿಕೆಯನ್ನು ಪಡೆದುಕೊಂಡಿದ್ದೇವೆ ಮತ್ತು ಯಾವ ಯಾವ ಪೊಲೀಸ್ ದಾಖಲೆಗಳನ್ನು ಪಡೆದುಕೊಂಡಿದ್ದೇವೆ ಎಂಬ ವಿವರಗಳು ನಮ್ಮ ತನಿಖಾ ವರದಿಯಲ್ಲಿ ಇವೆ.

16. ಅಪಘಾತದ ಸಮಯದಲ್ಲಿ KA-45-A-1611 ಸಂಖ್ಯೆಯ ವಾಹನವನ್ನು ಯಾರು ಚಾಲನೆ ಮಾಡುತ್ತಾ ಇದ್ದರು ಎಂಬ ಬಗ್ಗೆ ಪೊಲೀಸ್ ದಾಖಲೆಗಳಲ್ಲಿ ನಮೂದು ಇದೆ ಎಂದರೆ ಸರಿ.

17. ನಮ್ಮ ತನಿಖಾ ಕಾಲದಲ್ಲಿ ನಾವು ಕಲೆಹಾಕಿರುವ ಮಾಹಿತಿಗಳನ್ನು ನಿಶಾನೆ ಆರ್-5 ರಲ್ಲಿ ನಮೂದು ಮಾಡಲಾಗಿದೆ.

18. ನಾವು ಸಲ್ಲಿಸಿರುವ ತನಿಖಾ ವರದಿಯಲ್ಲಿ ಅಂದರೆ ನಿಶಾನೆ ಆರ್-5 ರಲ್ಲಿ ರಾಜೇಶನು ಕ್ಲೀನರ್ ಆಗಿದ್ದನು ಮತ್ತು ಮಂಜುನಾಥನು ಚಾಲಕ ಆಗಿದ್ದನು ಎಂದು ನಮೂದು ಇದೆ ಎಂದರೆ ಸುಳ್ಳು.

19. ನಮ್ಮ ತನಿಖಾ ವರದಿಯ ಫಲಿತಾಂಶದ ಆಧಾರದ ಮೇರೆಗೆ ಪೊಲೀಸರಿಗೆ ದೂರು ಕೊಡಬೇಕು ಎಂದು ನಾನು ನಿಶಾನೆ ಆರ್-5 ರಲ್ಲಿ ನಾನು ಸಲಹೆಯನ್ನು ನೀಡಿರುವುದಿಲ್ಲ.

20. ಯಾವ ಕೆಲಸವನ್ನು ಮುಗಿಸಿಕೊಂಡು ಬರುವಾಗ ಅಪಘಾತವು ಆಗಿದೆ ಮತ್ತು ರಾಜೇಶನ ಮರಣ ಸಂಭವಿಸಿದೆ ಎಂಬ ವಿಷಯವನ್ನು ನಿಶಾನೆ ಆರ್-5 ರಲ್ಲಿ ನಮೂದು ಮಾಡಲಾಗಿದೆ.

21. ಮಂಜುನಾಥ ಎಂಬ ವ್ಯಕ್ತಿಯೇ ಕೆಎ-45-ಎ-1611 ವಾಹನವನ್ನು ಅಪಘಾತದ ಸಮಯದಲ್ಲಿ ಚಾಲನೆ ಮಾಡುತ್ತಾ ಇದ್ದನು ಎಂಬುದಾಗಿ ಪೊಲೀಸ್ ದಾಖಲೆಗಳಲ್ಲಿ ನಮೂದು ಇವೆ ಎಂದರೆ ಸರಿ.

22. ನಾನು ಹೇಳುವ ಹಾಗೆ ನಾವು ಅರ್ಜಿದಾರರಾದ ಸೀತ ಮತ್ತು ವೆಂಕಟೇಶ ಮತ್ತು ಮೇಲೆ ಹೇಳಿದ ಸಾಗರ್ ರವರು ನನ್ನ ಮುಂದೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ ಎಂದರೆ ಸುಳ್ಳು.

23. ಆಡಿಯೋ ಮತ್ತು ವಿಡಿಯೋ ದಾಖಲೆಗಳನ್ನು ನಾವು ಸೃಷ್ಟಿ ಮಾಡಿದ್ದೇವೆ ಎಂದರೆ ಸುಳ್ಳು.

24. ಈ ಪ್ರಕರಣದ ಅರ್ಜಿದಾರರನ್ನು ಆಗಲೀ ಅಥವಾ ಸಾಗರ್ ರವರನ್ನು ಆಗಲೀ ನಾವು ಭೇಟಿ ಮಾಡಿರುವುದೇ ಇಲ್ಲ ಮತ್ತು ಕೇವಲ ನಮ್ಮ ಹೊಣೆಗಾರಿಕೆಯನ್ನು ತಪ್ಪಿಸಿಕೊಳ್ಳುವ ಉದ್ದೇಶದಿಂದ ನಮಗೆ ಬೇಕಾದ ಹಾಗೆ ತನಿಖಾ ವರದಿಯನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸುಳ್ಳು.

<u>ಪಾಟೀಸವಾಲು **1** ನೇ ಎದುರುದಾರರ ಪರವಾಗಿ ಶ್ರೀ ಬಿ.ಎಸ್.ಆರ್. ವಕೀಲರಿಂದಃ</u>

ಮಾನ್ಯ ವಕೀಲರು ಹಾಜರಿದ್ದಾರೆ ಮತ್ತು ಅರ್ಜಿದಾರರ ಪರವಾಗಿ ಶ್ರೀ ಕೆ.ಎಸ್.ಆರ್ ರವರು ಮಾಡಿರುವ ಪಾಟೀ ಸವಾಲನ್ನೇ ತಾವು ಸಹ ಅಳವಡಿಸಿಕೊಳ್ಳುತ್ತೇವೆ ಎಂದು ನುಡಿದಿದ್ದಾರೆ.

<u>ಮರುವಿಚಾರಣೆಃ</u> ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.
ಸಹಿ/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು, ಮಡಿಕೇರಿ